ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 163/2020</u>

..............................................................................

CW 02
PW 04

ಹೆಸರು : ಪಾಂಡು ಮಾಲಗಿ
ತಂದೆಯ ಹೆಸರು : ಸಾತೂರಿ
ವಯಸ್ಸು : 31 ವರ್ಷ
ಉದ್ಯೋಗ : ಕೃಷಿ
ವಾಸಸ್ಥಳ : ಬೆಳವಟಗಿ.

ದಿನಾಂಕ 10-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>**: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 3 ರವರು ಪರಿಚಯ ಇದ್ದಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದಾಳಿ ಕಾಲದ ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದಾಳಿ ಕಾಲದ ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 4 ವರ್ಷಗಳ ಹಿಂದೆ ಬೆಳವಟಗಿಯಲ್ಲಿ ಹೊಲಕ್ಕೆ ಹೋಗುವಾಗ ಮಾಡಿರುತ್ತೇನೆ.

ಸಾಕ್ಷಿಗೆ ನಿಪಿ 2 ಅನ್ನು ತೋರಿಸಲಾಗಿ ತಾವು, ಚಾಸಾ 3 ರವರು ಇರುತ್ತೆವೆ ಎನ್ನುತ್ತಾರೆ. ಸದರಿ ಭಾವಚಿತ್ರವನ್ನು ಯಾವ ಕಾರಣಕ್ಕೆ ಪಡೆದಿರುತ್ತಾರೆ,ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಭಾವಚಿತ್ರವನ್ನು ಬೆಳವಟಗಿಯ ಮಾರುತಿ ದೇವಸ್ಥಾನದ ಹತ್ತಿರ ತೆಗೆದಿರುತ್ತಾರೆ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 7 ಅನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ಈ ಹಿಂದೆ ನೋಡಿಲ್ಲ ಎನ್ನುತ್ತಾರೆ. ಆರೋಪಿಯು ನಮ್ಮ ಊರಿನವನು ಆತನನ್ನು ನೋಡಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 21-10-2019 ರಂದು ಚಾಸಾ 1 ರವರು ನನ್ನನ್ನು ಮತ್ತು ಚಾಸಾ 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಭಾತ್ಮಿ ವಿಷಯವನ್ನು ತಿಳಿಸಿ, ಪಂಚರಾಗಲು ಕೋರಿಕೊಂಡರು ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿಕೊಂಡು ಸರ್ಕಾರಿ ಜೀಪಿನಲ್ಲಿ ನಮ್ಮನ್ನು ನಮ್ಮನ್ನು ಘಟನಾ ಜಾಗಕ್ಕೆ ಕರೆದುಕೊಂಡು ಹೋಗಿ ಆರೋಪಿಯನ್ನು ಬಂಧಿಸಿ ಆತನಿಂದ ಮು.ಮಾ. 1 ರಿಂದ 7 ಅನ್ನು ಜಪ್ತುಪಡಿಸಿಕೊಂಡು ನಿಪಿ 1 ರಂತೆ ಸಂಜೆ 05-15 ರಿಂದ 07-00 ಗಂಟೆಯ ವರೆಗೆ ಪಂಚನಾಮೆ ಜರುಗಿಸಿ ನಿಪಿ 2 ರಂತೆ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ